## ೨.೦ ಅರ್ಹತೆ ಮಾನದಂಡ:

(ಅ) ರಾಷ್ಟ್ರೀಯತೆ : ಅಭ್ಯರ್ಥಿ ಭಾರತದ ಪ್ರಜೆಯಾಗಿರಬೇಕು

(ಆ) 1. ವಯೋಮಿತಿ (01.01.2021 ರಂತೆ) :

| ಕ್ರ.ಸಂ. | ಹುದ್ದೆ | ಗರಿಷ್ಠ ವಯೋಮತಿ (01.01.2021) ರಂತೆ |
|---|---|---|
| 1. | ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ(ಇ ಎ ಟಿ) | 28 ವರ್ಷ |
| 2. | ಟೆಕ್ನೀಶಿಯನ್ - ಸಿ | 28 ವರ್ಷ |

2. ಗರಿಷ್ಠ ವಯೋಮತಿಯಲ್ಲಿ ಸಡಿಲಿಕೆ:

| ಕ್ರ.ಸಂ. | ವರ್ಗ | ವಯೋಮಿತಿಯಲ್ಲಿ ಸಡಿಲಿಕೆ |
|---|---|---|
| 1 | ಇ.ಹಿ.ವ (ಮೇಲ್ಪದರ ವರ್ಗ) | 3 ವರ್ಷ |
| 2 | ಪ.ಜಾ./ ಪ.ಪಂ. | 5 ವರ್ಷ |
| 3 | ಕನಿಷ್ಠ 40% ಅಂಕವಿಕಲತೆಯುಳ್ಳ (ಪಿ.ಡಬ್ಲ್ಯು.ಡಿ) ವ್ಯಕ್ತಿ | 10 ವರ್ಷ |

3. ಮೇಲೆ ಸೂಚಿಸಿದ ಗರಿಷ್ಠ ವಯೋಮಿತಿಯು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ.

4. ವಯೋಮಿತಿಯಲ್ಲಿ ಸಡಿಲಿಕೆಯನ್ನು ಬಯಸುವ ಅಭ್ಯರ್ಥಿಗಳು ಅವಶ್ಯಕ ಪ್ರಮಾಣ ಪತ್ರಗಳನ್ನು ತಮ್ಮ ಅರ್ಜಿಯೊಂದಿಗೆ ಲಗತ್ತಿಸಿ, ಲಿಖಿತ ಪರೀಕ್ಷೆ ಅಥವಾ/ ಮತ್ತು ನಂತರದ ಪರಿಶೀಲನೆ ಪ್ರಕ್ರಿಯೆಯ ಹಂತದಲ್ಲಿ ಮೂಲ ಪ್ರತಿಯನ್ನು ಪ್ರಸ್ತುತ ಪಡಿಸಬೇಕು.

5. ಇ. ಡಬ್ಲ್ಯು.ಎಸ್/ ಜಾತಿ/ ಅಂಗವಿಕಲತೆ ಪ್ರಮಾಣ ಪತ್ರವು ಕಡ್ಡಾಯವಾಗಿ ಬಿ ಇ ಎಲ್ ಜಾಲತಾಣದಲ್ಲಿ ಲಭ್ಯವಿರುವ ನಮೂನೆಯಲ್ಲಿ ಇರಬೇಕು, ವಿಫಲವಾದಲ್ಲಿ ಅಭ್ಯರ್ಥಿಗಳನ್ನು 'ಸಾಮಾನ್ಯ' ವರ್ಗದ ಅಡಿಯಲ್ಲಿ, ಅವರು ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಇತರೆ ಎಲ್ಲ ಮಾನದಂಡಗಳನ್ನು ಪೂರೈಸುವ ಸಂದರ್ಭದಲ್ಲಿ ಮಾತ್ರ ಪರಿಗಣಿಸಲಾಗುತ್ತದೆ.

6. ಕನಿಷ್ಠ 40% ಅಂಗವೈಕಲ್ಯ ಹೊಂದಿರುವ ವಿಕಲಾಂಗ (ಪಿ.ಡಬ್ಲ್ಯು.ಡಿ) ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ವಯೋವಿತಿಯಲ್ಲಿ 10 ವರ್ಷಗಳು ಸಡಿಲಿಕೆ ಸೇರಿದ್ದಂತೆ ಮೇಲೆ ತಿಳಿಸಿದ ಪ.ಜಾ./ಅ.ಬು./ ಇ.ಹಿ.ವ ದ ವಯೋಮಿತಿಯ ಸಡಿಲಿಕೆಯು ಕೂಡ ಅನ್ವಯವಾಗುತ್ತದೆ.

**(ಇ) ಶೈಕ್ಷಣಿಕ ವಿದ್ಯಾರ್ಹತೆ:**

1. ೧- ಹುದ್ದೆಗಳು, ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಎಲ್ಲಾ ಶೈಕ್ಷಣಿಕ ವಿದ್ಯಾರ್ಹತೆಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇರಬೇಕು.
2. ಅಭ್ಯರ್ಥಿಯು ಸಮಂಜಸವಾದ ಎಲ್ಲಾ ಅಂಕ ಪಟ್ಟಿ/ ಅಂತಿಮ ಪ್ರಮಾಣಪತ್ರ (ಘಟಾಕೋತ್ಸವ ಪ್ರಮಾಣ ಪತ್ರ) ವನ್ನು ಹೊಂದಿರಬೇಕು.
3. ಕನಿಷ್ಠ ಶೈಕ್ಷಣಿಕ ಅರ್ಹತೆಗೆ ಬೇಕಾದ ಪ್ರಾವೀಣ್ಯತೆಯನ್ನು ಅಂತಿಮ ಪ್ರಮಾಣಪತ್ರದಲ್ಲಿ ಉಲ್ಲೇಖಿಸದಿದ್ದಲ್ಲಿ, ಅಭ್ಯರ್ಥಿಗಳು ಅರ್ಜಿಯೊಂದಿಗೆ ವಿಶ್ವವಿದ್ಯಾಲಯ / ಸಂಸ್ಥೆ / ಕಾಲೇಜಿನಿಂದ ಪಡೆದ ಪ್ರಮಾಣ ಪತ್ರದ ಪ್ರತಿಗಳೋಂದಿಗೆ ಮೂಲ ಪ್ರತಿಯನ್ನು ಪರಿಶೀಲನೆಯ ಸಮಯದಲ್ಲಿ ತಮ್ಮ ಪ್ರಾವೀಣ್ಯತೆ ಬಗ್ಗೆ ಸ್ಪಷ್ಟವಾಗಿ ಅಂತಿಮ ಪ್ರಮಾಣಪತ್ರದಲ್ಲಿ ಉಲ್ಲೇಖ ಮಾಡಲಾಗಿದ್ದು ಅದನ್ನು ಲಗತ್ತಿಸಿ ಸಲ್ಲಿಸಬೇಕು.

